ಕರ್ನಾಟಕ ಸರ್ಕಾರ

# ಭ್ರಷ್ಟಾಚಾರ ನಿಗ್ರಹ ದಳ

## ಪತ್ರಿಕಾ ಪ್ರಕಟಣೆ

ದಿನಾಂಕ 23/01/2019.

ತುಮಕೂರು ತಾಲ್ಲೂಕು ಗೌಡಿಹಳ್ಳಿ ಗೊಲ್ಲರಹಟ್ಟಿ ಗ್ರಾಮದ ನಿವಾಸಿಯೊಬ್ಬರು ತಮ್ಮ ಜಮೀನಿನಲ್ಲಿ ಹೊಸದಾಗಿ ಬೋರ್‌ವೆಲ್ ಕೊರೆಯಿಸಲು ಪಾಯಿಂಟ್ ಮಾಡಿಕೊಡಲು ಹಾಗೂ ಈಗಾಗಲೇ ಕೊರೆಯಿಸಿರುವ ಬೋರ್‌ವೆಲ್ ಅನ್ನು ನೋಂದಣಿ ಮಾಡಿಕೊಡಲು ಕೋರಿ ಗಣಿ ಮತ್ತು ಭೂವಿಜ್ಞಾನ ಇಲಾಖೆಯ ಅಂತರ್ಜಲ ವಿಭಾಗದಲ್ಲಿ ಅರ್ಜಿಯನ್ನು ಸಲ್ಲಿಸಿಕೊಂಡಿರುತ್ತಾರೆ. ಶ್ರೀ.ಟಿ.ವೆಂಕಟೇಶ್, ಹಿರಿಯ ಭೂವಿಜ್ಞಾನಿ, ಪ್ರಭಾರ ನಿರ್ದೇಶಕರು, ಜಿಲ್ಲಾ ಅಂತರ್ಜಲ ನಿರ್ದೇಶನಾಲಯ, ತುಮಕೂರು ರವರು ಅರ್ಜಿದಾರರ ಹೊಸ ಬೋರ್‌ವೆಲ್ ಪಾಯಿಂಟ್ ಮಾಡಿಕೊಡಲು ಹಾಗೂ ಈಗಾಗಲೇ ಕೊರೆಯಿಸಿರುವ ಬೋರ್‌ವೆಲ್ ಅನ್ನು ನೋಂದಣಿ ಮಾಡಿಕೊಡಲು ರೂ.4,500/- ಲಂಚದ ಹಣಕ್ಕೆ ಬೇಡಿಕೆ ಇಟ್ಟಿರುತ್ತಾರೆ.

ದಿನಾಂಕ:23/01/2019 ರಂದು ಶ್ರೀ.ಹರ್ಷ, ಖಾಸಗಿ ವ್ಯಕ್ತಿ ರವರು ಶ್ರೀ.ಟಿ.ವೆಂಕಟೇಶ್ ರವರ ನಿರ್ದೇಶನದ ಮೇರೆಗೆ ದೂರುದಾರರಿಂದ ರೂ.4,500/- ಲಂಚದ ಹಣವನ್ನು ಪಡೆಯುತ್ತಿದ್ದಾಗ ತುಮಕೂರು ಭ್ರಷ್ಟಾಚಾರ ನಿಗ್ರಹ ದಳದ ಅಧಿಕಾರಿಗಳಿಗೆ ಸಿಕ್ಕಿಬಿದ್ದಿರುತ್ತಾರೆ. ಇಬ್ಬರೂ ಆರೋಪಿತರನ್ನು ದಸ್ತಗಿರಿ ಮಾಡಿ, ಲಂಚದ ಹಣವನ್ನು ವಶಪಡಿಸಿಕೊಳ್ಳಲಾಗಿದೆ, ತನಿಖೆ ಮುಂದುವರೆದಿದೆ.